ಅನಿಸಿಕೆ. ಅವರು ಒಗ್ಗೂಡುವುದು ಸಾಮಾಜಿಕ ಅಗತ್ಯವಾಗಿದೆ. ಮೀಸಲಾತಿ ಪಡೆಯುವವರೆಲ್ಲರೂ ಒಗ್ಗೂಡಬೇಕಾಗಿದೆ. ಅಂಬೇಡ್ಕರರೂ ದಲಿತರನ್ನು, ಮುಸ್ಲಿಂರನ್ನು ಒಗ್ಗೂಡಿಸುವ ಪ್ರಯತ್ನ ಮಾಡಿದ್ದರು. ಈಗ ಚಳವಳಿಗಳು ಅಂತರ್ಮುಖಿಯಾಗಿ ಯೋಚಿಸಬೇಕಾದ ಅಗತ್ಯವಿದೆ.

◆ ನೀವು ಅಂಬೇಡ್ಕರರ ವಿಚಾರಗಳ ಪ್ರಚಾರಕರು. ಆದರೂ ನಿಮಗೆ ಗಾಂಧಿ ಮಾರ್ಕ್ಸ್ ಸನಿಹದವರೆನಿಸುತ್ತಾರೆ. ಇದು ಹೇಗೆ ಸಾಧ್ಯ?

ಗಾಂಧಿ–ಮಾರ್ಕ್ಸ್–ಅಂಬೇಡ್ಕರರು ಕೇವಲ ಮಹಾಪುರುಷರು ಮಾತ್ರರಾಗಿರಲಿಲ್ಲ, ಜಗತ್ತೇ ಸ್ವೀಕರಿಸಿದ, ಉನ್ನತಿಯತ್ತ ಸಾಗುವ ವಿಚಾರ ಧಾರೆಗಳಾಗಿದ್ದಾರೆ. ತತ್ತ್ವಜ್ಞಾನವಾಗಿ ಅವರೆಂದೂ ನಾಶವಾಗುವುದಿಲ್ಲ.

◆ ಅಂಬೇಡ್ಕರ್‌ವಾದಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಮತ್ತು ಸಮಾಜವಾದಿಗಳು ವೈಚಾರಿಕವಾಗಿ ಒಗ್ಗೂಡಬೇಕೆ?

ದಲಿತ ಸಾಹಿತ್ಯದ ವಿಕಾಸ ಪ್ರಕ್ರಿಯೆಯಲ್ಲಿ ಒಂದು ಗುಂಪು ಸತತವಾಗಿ ಮಾರ್ಕ್ಸ್, ಗಾಂಧಿಯವರನ್ನು ವಿರೋಧಿಸುತ್ತ ಬಂದಿದೆ. ಈಗದು ಜಾತಿ ಸ್ವರೂಪವನ್ನು ತಾಳಿದೆ. ಸಮಾನತೆಯ ವಿಚಾರಗಳು ಒಂದಾಗಬೇಕೆಂಬ ಭಾವನೆ ನನ್ನದು. ವೈಚಾರಿಕ ಪಾತಳಿಯಲ್ಲಿ ನಾವು ಖಚಿತವಾಗಿರಬೇಕು, ಹೋರಾಟದ ಪಾತಳಿಯಲ್ಲಿ ನಾವು ಪ್ರಯೋಗಶೀಲರಾಗಬೇಕು.

ನನ್ನ ಪ್ರಕಾರ ಸಮತಾವಾದಿ ಎಂದರೆ, ಸಂವಿಧಾನದ ಬಗೆಗೆ ನಿಷ್ಠೆಯಿದ್ದವರು, ಪ್ರಜಾಪ್ರಭುತ್ವವನ್ನು ಒಪ್ಪುವ ವಿಜ್ಞಾನವಾದಿ, ವಿವೇಕವಾದಿ ಎಂದರ್ಥ.

◆ ದಲಿತ ಸಾಹಿತ್ಯದಲ್ಲಿ ಆಕೃತಿಗಿಂತ ಆಶಯಕ್ಕೆ ಮಹತ್ತ್ವ ನೀಡಲಾಗಿದೆ. ಕಲೆಯ ದೃಷ್ಟಿಯಿಂದ ಇದು ಸರಿಯೇ?

ಕಲಾವಾದಿ ಸಾಹಿತ್ಯದಲ್ಲಿ ಆಕೃತಿಗೆ ಮಹತ್ತ್ವ ನೀಡಲಾಗುತ್ತದೆ. ದಲಿತ ಸಾಹಿತ್ಯ ಜೀವನವಾದಿ ಸಾಹಿತ್ಯವಾಗಿದೆ. ಓದುಗರ ಮನದಲ್ಲಿ ಆಶಯದಿಂದ ಬದಲಾವಣೆಯಾಗುತ್ತದೆ. ಓದುಗನು ಜಗತ್ತು ಮತ್ತು ಜೀವನವನ್ನು ಅರಿಯಲು ಸಾಹಿತ್ಯವನ್ನು ಓದುತ್ತಿರುತ್ತಾನೆ. ಆಶಯದಲ್ಲಿ ಜೀವನದ ಪ್ರತಿಬಿಂಬವಿರುತ್ತದೆ. ಅದರಿಂದಾಗಿ ಆಶಯ ಮಹತ್ತ್ವದ್ದೆನಿಸುತ್ತದೆ. ದಲಿತ ಸಾಹಿತ್ಯದ ಆಕೃತಿ ಭಿನ್ನವಾಗಿರುತ್ತದೆ. ವಿದ್ರೋಹಿ ಸಾಹಿತ್ಯದ ಆಕೃತಿ ಕಲಾತ್ಮಕವಾಗಿರಲಾರದು. ಅದು ಒರಟೊರಟಾಗಿ ಇರಲಾರದು. ದಲಿತ ಸಾಹಿತ್ಯವು ತಥಾಕಥಿತ ಸಾಹಿತ್ಯದ ಆಕೃತಿಗಳನ್ನು ಮುರಿದು ಕಟ್ಟುವ ಕಾಯಕ ಮಾಡುತ್ತದೆ.

◆ ದಲಿತ ಸಾಹಿತ್ಯಕ್ಕೆ ಬೇರೆ ವಿಮರ್ಶೆ ಬೇಕೆ? ಬೇಕಿದ್ದರೆ ಅದರ ಸ್ವರೂಪ ಹೇಗಿರಬೇಕು?

ದಲಿತ ಸಾಹಿತ್ಯದ ವಿಮರ್ಶೆಯು ಬೇರೆ ಬಗೆಯದೇ ಆಗಿರುತ್ತದೆ. ವ್ಯವಸ್ಥೆಯನ್ನು ಅರಿಯದ ಹೊರತು ದಲಿತನನ್ನು ಅರಿಯುವುದು ಸಾಧ್ಯವಿಲ್ಲ. ದಲಿತ ಸಾಹಿತ್ಯ ಕೇವಲ ಒಂದು ಸಾಹಿತ್ಯವಲ್ಲ. ಈ ಸಾಹಿತ್ಯದ ಲೇಖಕನು ಒಬ್ಬ ಕಾರ್ಯಕರ್ತನಾಗಿದ್ದಾನೆ. ದಲಿತ ಸಾಹಿತ್ಯವನ್ನು ಸಾಮಾಜಿಕ ಪರಿವರ್ತನೆಗಾಗಿ ಬರೆಯಲಾಗುತ್ತದೆ. ದಲಿತ ಸಾಹಿತ್ಯವನ್ನು ಸಮಾಜಶಾಸ್ತ್ರೀಯ ದೃಷ್ಟಿಯಿಂದ ವಿಮರ್ಶೆಮಾಡಬೇಕಾಗುತ್ತದೆ. ಕಲಾವಾದಿ ಸಾಹಿತ್ಯವು ಈ ಸಾಹಿತ್ಯಕ್ಕೆ ನ್ಯಾಯವನ್ನು ನೀಡಲಾರದು. ದಲಿತ ಸಾಹಿತ್ಯವನ್ನು ಈ ರೀತಿ ವಿಮರ್ಶೆಮಾಡುವಂತಾಗಬೇಕು. ಪಾರಂಪಾರಿಕ ಮಾನಸಿಕತೆಯಿಂದ